ಔಷಧಿಯನ್ನು ಕೊಡುತ್ತಿದ್ದರು. 'ಸ್ವಾಮೀ ಹುಟ್ಟಿದ ಲಾಗಾಯ್ತಿನಿಂದ ಹಾಲು ಕುಡಿಯುತ್ತ ಬಂದಿದ್ದಾಳೆ ಆಕೆ. ಈಗ ಒಮ್ಮೆಲೇ ಹೀಗಾಯ್ತೆಂದರೆ...' ಎಂದು ನಾನು ಪ್ರಶ್ನೆಯೆತ್ತಿದರೆ 'ಈ ಅಲರ್ಜಿಯ ಕತೆಯೇ ಹೀಗೆ ನೋಡಿ. ನಿಮ್ಮ ಬಾಲ್ಯ ಸ್ನೇಹಿತನೊಬ್ಬ ಒಮ್ಮೆಗೇ ನಿಮ್ಮ ವೈರಿಯಾಗಿ ಮಾರ್ಪಾಡಾದಂತೆ' ಎಂದು ಸಮಜಾಯಿಶಿ ಕೊಟ್ಟಿದ್ದರು.

ಅದೇ ನಾವು ಇಂಡಿಯಾಕ್ಕೆ ಹಿಂದಿರುಗಿದ ವರ್ಷವೇ ಬೆಂಗಳೂರಿನ ಡಾಕ್ಟರುಗಳು ರೋಗವನ್ನು ಪತ್ತೆ ಹಚ್ಚಿ ಆಪರೇಷನ್ ಮಾಡಿ ನನ್ನವಳ ಬೆನ್ನನ್ನು ನೇರ್ಪುಗೊಳಿಸಿದ್ದರು. ಲಂಡನ್ನಿನ ಡಾಕ್ಟರುಗಳು ಮೂರು ವರ್ಷಗಳ ಕಾಲ ಪ್ರಯತ್ನಿಸಿದರೂ ಕಂಡು ಹಿಡಿಯಲಾಗದಿದ್ದುದನ್ನು ಇಲ್ಲಿ ಡಾಕ್ಟರುಗಳು ಮೂರೇ ತಿಂಗಳಲ್ಲಿ ಕಂಡು ಹಿಡಿದದ್ದಷ್ಟೇ ಅಲ್ಲ ಗುಣಪಡಿಸಿಯೇ ಬಿಟ್ಟಿದ್ದರು

★★★

ಹಾಗೆಂದಾಕ್ಷಣ ನಮ್ಮ ದೇಶದಲ್ಲಿನ ಡಾಕ್ಟರುಗಳೆಲ್ಲರೂ ದೈವಸ್ವರೂಪಿಗಳೋ ಇಲ್ಲವೇ ಚರಕ ಶುಶ್ರುತನ ಅಪರಾವತಾರವೋ ಎಂದಲ್ಲ. ಎಲ್ಲ ಕಡೆ ನುಗ್ಗಿದ ಕಾರ್ಪೊರೇಟ್ ಸಂಸ್ಕೃತಿ ಒಂದು ಕಾಲದಲ್ಲಿ ದೈವೀಕ ವೃತ್ತಿಯೆಂದು ಪರಿಗಣಿತವಾಗಿದ್ದ ವೈದ್ಯಕೀಯ ವೃತ್ತಿಯನ್ನೂ ಬಿಟ್ಟಿಲ್ಲ.

ಯಾವುದೇ ಆಸ್ಪತ್ರೆಗೆ ಚಿಕ್ಕ ಕಾಯಿಲೆಯೆಂದು ಹೋಗಿ ಅಲ್ಲಿ ಪ್ರತಿ ಡಾಕ್ಟರುಗಳ ಹತ್ತಿರವೂ ಪೇಷಂಟುಗಳನ್ನು ಯಾವ ಯಾವ ಪರೀಕ್ಷೆಗೆ ಒಳಪಡಿಸಬೇಕೆಂಬುದರ ಪಟ್ಟಿಯೇ ಇರುತ್ತದೆ. ನಿಮ್ಮ ಮುಖವನ್ನೇ ನೋಡುತ್ತ ಆ ಪಟ್ಟಿಯ ಮೇಲಿನ ಐಟಮುಗಳಿಗೆ ಟಿಕ್ ಮಾಡುತ್ತಲೇ ಹೋಗುವ ಆ ಡಾಕ್ಟರ್ ಮೊದಲಿಗೆ ಬರೆಯಬೇಕಿದ್ದ ನಿಮ್ಮ ಹೆಸರನ್ನು ತುಂಬಿಸುವುದು ಕೊನೆಯಲ್ಲಿ.

ಆಸ್ಪತ್ರೆಗಳಲ್ಲಿ ಅವರ ಸ್ಥಾನ ಅವರು ಬರೆಯುವ ಅಂತಹ ಪಟ್ಟಿಯನ್ನೇ ಅವಲಂಬಿಸಿರುತ್ತದೆಯಾದ್ದರಿಂದ ಮುಳ್ಳು ಚುಚ್ಚಿದ ನಿಮ್ಮ ಕಾಲಿಗೂ ನಿಮ್ಮ ಹೃದಯಕ್ಕೂ ಸಂಬಂಧ ಕಲ್ಪಿಸುವ ಬುದ್ಧಿವಂತಿಕೆಯನ್ನು ಅವರು ರೂಢಿಸಿಕೊಳ್ಳದಿದ್ದರೆ ಅವರು ಬದುಕುವುದು ಬೇಡವೇ. ಅವರು ಅವರ ಹೆಂಡತಿ ಮಕ್ಕಳು ಸಮಾಜದಲ್ಲಿ ತಮ್ಮ ಸ್ಥಾನವನ್ನು ಕಾಪಾಡಿಕೊಳ್ಳುವುದು ಬೇಡವೇ.

ಅಂತಹುದೇ ಒಂದು ಸಂದರ್ಭದಲ್ಲಿ ನನಗೇ ಬೆನ್ನು ನೋವೊಂದು ಶುರುವಾಗಿತ್ತು. ಕುರ್ಚಿಯ ಮೇಲೇ ಒಂದೇ ಭಂಗಿಯಲ್ಲಿ ಕುಳಿತುಕೊಂಡದ್ದರಿಂದ ಅದು ಪ್ರಾರಂಭವಾದದ್ದೆಂತಲೂ ತಿಳಿದಿತ್ತು ನನಗೆ. 'ಕಾಲ ಕಾಲದಿಂದಲೂ ಹಾಗೇ ಕುಳಿತುಕೊಳ್ಳುತ್ತಿದ್ದಿರಿ. ಅದು ಈಗ ಮಾತ್ರ ಯಾಕೆ ಬರಬೇಕು' ಎನ್ನುವ ಹೆಂಡತಿಯ ಸವಾಲಿಗೆ ನನ್ನಲ್ಲಿ ಉತ್ತರವಿರಲಿಲ್ಲ. ಜೊತೆಗೇ ಆಗಷ್ಟೇ ಕೆಲಸಕ್ಕೆ ಸೇರಿ ಮೂವತ್ತು ವರ್ಷಗಳ ಕಾಲ ಒಂದೇ ಸಂಸ್ಥೆಯಲ್ಲಿ ಕೆಲಸ ಮಾಡುತ್ತ ಸಾಕಷ್ಟು ಬಡ್ತಿಯನ್ನೂ ಪಡೆದಿದ್ದ ನನಗಿಂತ ಮೂರುಪಟ್ಟು ಸಂಬಳ ಪಡೆಯಲು ಪ್ರಾರಂಭಿಸಿದ್ದ ನನ್ನ ಮಗಳ ಅಧಿಕಾರಯುತ ಆದೇಶ ಬೇರೆ.

ಅಂತೂ ಡಾಕ್ಟರ ಹತ್ತಿರ ಹೋಗುವುದೆಂದು ನಿರ್ಧರಿಸಿಯೆ ಬಿಟ್ಟೆ ಮತ್ತು ಪಟ್ಟಣದಲ್ಲಿಯೇ ಹೆಸರಾದ ಮೂಳೆ ತಜ್ಞರೊಬ್ಬರನ್ನು ಭೇಟಿ ಮಾಡಿದೆ. ನನ್ನ ಮುಖವನ್ನೂ ನೋಡದೆ ಕೆಲವು ಪ್ರಶ್ನೆಗಳನ್ನು ಕೇಳಿದ ಅವರು ನನ್ನನ್ನು ತಳ್ಳಿದ್ದು ಎಕ್ಸ–ರೇ ಕೋಣೆಗೆ. ಮಂಚದ ಮೇಲೆ ಮಲಗಿಸಿ ನನ್ನನ್ನು ಅತ್ತ ಹೊರಳಿಸಿ ಇತ್ತ ತಿರುಗಿಸಿ ನಾಲ್ಕಾರು ಎಕ್ಸರೇಗಳನ್ನು ತೆಗೆದ ಅವರ ಶಿಷ್ಯ ನಾನು ಬಟ್ಟೆ ಸರಿಪಡಿಸಿಕೊಂಡು ಹೊರಬಂದು ಡಾಕ್ಟರೊಡನೆ ಮಾತನಾಡುತ್ತಿರುವಾಗಲೇ ಒಂದಿಷ್ಟು ಫಿಲ್ಮ್‌ಗಳನ್ನು ತಂದು ಅವರ ಮುಂದೆ ಇಟ್ಟಿದ್ದ. ಉಳಿದೆಲ್ಲದರ ಮೇಲೆ ಕಣ್ಣು ಹಾಯಿಸಿದಂತೆ